ಉತ್ತರಿಸಿದಳು. ಮುಂದೆ ಏನು ಮಾತನಾಡಬೇಕೆಂದು ಅವನಿಗೆ ಗೊಂದಲವಾಗಿ, 'ಚಾಕೊಲೇಟ್ ತಿನ್ತೀಯಾ ಬೇಬಿ... ಅಲ್ಲಲ್ಲಾ, ಡಿಯರ್ ಆಪಲ್?' ಎಂದು ಕೇಳುತ್ತಲೇ ಇಷ್ಟಗಲದ ಚಾಕೊಲೇಟನ್ನು ತೆಗೆದು ಅವಳ ಕೈಗಿತ್ತ. ಅವಳ ಕಣ್ಣುಗಳು ಕೂಡ ಅಷ್ಟೇ ಅಗಲ ತೆರೆದವು 'ಥ್ಯಾಂಕ್ಯು ಅಂಕಲ್' ಎಂದಳು. ಅವನಿಗೆ ಖುಷಿ ಅನಿಸಿತು, ಓಹೋ ಮಗಳು ಮದುವೆಗೆ ಬಂದರೂ ತಾನಿನ್ನೂ ಅಂಕಲ್ ಎಂದು.

ಅವಳಿಗೆ ಇನ್ನೊಂದು ಸರ್ಪ್ರೈಸ್ ಕೊಟ್ಟರೆ ಹೇಗೆ ಎಂದು ತಾನು ಕೊಂಡಿದ್ದ ಗೊಂಬೆಯನ್ನು ಅವಳ ಎದುರಿಗೆ ಇರಿಸಿದ. ಅವಳು ಅದನ್ನು ಕೂಡ ಅತ್ಯಂತ ಸಂಭ್ರಮದಿಂದಲೇ ಮುಟ್ಟಿ ನೋಡಿ ಅವನತ್ತ ಒಂದು ಥ್ಯಾಂಕ್ಯು ನೋಟವನ್ನು ಬೀರಿದಳು. ಈಗ ಅಸಲು ವಿಷಯಕ್ಕೆ ಅವನು ಬರಬೇಕಿತ್ತು. 'ನೀನು ಯಾರ ಬಳಿ ಇದ್ದೀಯಾ ಆಪಲ್ ಬೇಬಿ?' ಎಂದು ಕೇಳಿದ. ಅವಳು, 'ಅಜ್ಜಿಯ ಹತ್ತಿರ' ಎಂದಳು.

ಓ ದೇವರೇ, ಯಾವ ಅಜ್ಜಿ ಎಂದು ಹೇಗೆ ಬಾಯಿ ಬಿಡಿಸುವುದು?

'ಅಜ್ಜಿಯ ಹೆಸರು ಗೊತ್ತಾ?' ಎಂದು ಕೇಳಿದ. ಇಲ್ಲವೆಂದು ತಲೆಯಾಡಿಸಿದಳು ಅವನು ಮತ್ತಷ್ಟು ಗೊಂದಲ ಮಾಡುವುದು ಬೇಡವೆಂದು ಎಣಿಸಿ, 'ನಿನಗೆ ಇಬ್ಬರು ಅಜ್ಜಿಯಂದಿರು ಹೌದಾ ಪುಟ್ಟ?' ಎಂದು ಕೇಳಿದ. ಹೌದು ಎಂದು ತಲೆಯಾಡಿಸಿದಳು ಅವಳ ದೃಷ್ಟಿಯೆಲ್ಲ ಚಾಕಲೇಟಿನ ಮೇಲೆ ಇದ್ದುದನ್ನು ಕಂಡು ಅದರ ರ್‍ಯಾಪರನ್ನು ಬಿಡಿಸಿ ಅವಳ ಕೈಗೆ ಒಂದು ತುಂಡನ್ನು ನೀಡಿದ. ಅವಳು ತಟಕ್ಕನೆ ಬಾಯಿಗೆ ಹಾಕಿಕೊಂಡು ಅದರ ಸ್ವಾದವನ್ನು ಅನುಭವಿಸುತ್ತಾ ಅವನ ಮೋರೆಯತ್ತ ನೋಡಿದಳು. ಅವನು ಬೊಂಬೆಯನ್ನು ಕೂಡ ಎತ್ತಿ ಅವಳ ಕೈಗಿತ್ತ. ಅದನ್ನು ತನ್ನ ಮಡಿಲಿನಲ್ಲಿ ಕೂರಿಸಿಕೊಂಡು ಅವಳು ಅದನ್ನು ಆಪ್ತವಾಗಿ ತಡವಿದಳು. ಅವಳ ತಾಯಿಯೇ ಅವಳನ್ನು ಮಡಿಲಲ್ಲಿ ಕೂರಿಸಿಕೊಂಡು ಅವಳ ಮೈದಡವಿ ಮುದ್ದು ಮಾಡಿದಂತೆ ಅವನಿಗೆ ಭಾಸವಾಯಿತು. ಛೇ, ಯಾರಿದ್ದರೂ ಕೊಡ ತಂದೆ ತಾಯಿಯರಂತೆ ಪ್ರೀತಿಯನ್ನು ಮತ್ತು ಸುರಕ್ಷತೆಯನ್ನು ನೀಡಲು ಸಾಧ್ಯವಿಲ್ಲ ಎಂದು ಅವನು ಮೃದುವಾದ. ಅವಳ ಅಜ್ಜಿಯರ ಹಕ್ಕು ಸಾಧನೆಗಿಂತ ಮಗುವಿನ ಭವಿಷ್ಯದ ದೃಷ್ಟಿಯಿಂದ ಆ ಮಗುವನ್ನು ಯಾರ ಕೈಗೆ ಒಪ್ಪಿಸಬೇಕು ಅಥವಾ ಇಬ್ಬರ ಬಳಿ ಕೂಡ ಒಂದಿಷ್ಟು ದಿನಗಳ ಕಾಲ ಇರಬೇಕೆಂದು ಆದೇಶ ಮಾಡಿದಲ್ಲಿ ಆ ಮಗುವಿನ ಮೇಲೆ ಯಾವ ಪರಿಣಾಮ ಬೀರಬಹುದು ಅದರ ಆರೋಗ್ಯವಂತ ಬೆಳವಣಿಗೆಯ ದೃಷ್ಟಿಯಿಂದ ಆಕೆ ಯಾರ ಬಳಿ ಉಳಿಯಬೇಕು? ಆ ಮಗುವಿನ ಹಿತದೃಷ್ಟಿಗೆ ಹಿನ್ನೆಲೆಯಾಗಿ ಬೇಕಾದ ಆರ್ಥಿಕ ಮಾನಸಿಕ ದೈಹಿಕ ಪೂರಕ ಅಂಶಗಳು ಯಾವುದು ಇರಬೇಕು? ಆರೋಗ್ಯವಂತ ಮನಸ್ಸು ಮತ್ತು ದೇಹದ ಸಂಪೂರ್ಣ ವ್ಯಕ್ತಿತ್ವವನ್ನು ಹೊಂದಲು ಅವಳನ್ನು ಯಾರ ಸುಪರ್ದಿಗೆ ನೀಡಬೇಕು? ಓ ದೇವರೇ, ನಾನು ಇದರ ತೀರ್ಮಾನ ಹೇಗೆ ಮಾಡಬೇಕು, ನನ್ನ ಬಳಿ ಯಾವ ತನಿಖಾ ಸಂಸ್ಥೆ ಇದೆ? ಆ ಮಗುವಿನ ಮನಸ್ಸಿನ ಆಳವಾದ ಒಳಸುಳಿಗಳಿಗೆ ತಾನು ಹೇಗೆ ಸ್ಪಂದಿಸಬೇಕು. ಒಂದಿಷ್ಟು ಏರುಪೇರಾದರೂ ಕೂಡ ಆ ಮಗುವಿನ ಬದುಕಿನ ಸಾಧಕ ಬಾಧಕಗಳಿಗೆ ನೈತಿಕವಾಗಿ ತಾನು ಹೊಣೆಗಾರನಾಗಬೇಕಾದ ಅನಿವಾರ್ಯತೆ ಅವನನ್ನು ಕಾಡುತ್ತಿತ್ತು.

ಆ ಮಗುವನ್ನು ದಿಟ್ಟಿಸಿ ನೋಡುತ್ತಿದ್ದ ಅವನು ಬೆಲ್ ಮಾಡಿ ಆ ಇಬ್ಬರು ಅಜ್ಜಿಯಂದಿರನ್ನು ಕೂಡ ತನ್ನ ಚೇಂಬರಿಗೆ ಕರೆಸಿಕೊಂಡ. ಅವರಿಬ್ಬರ ಬಳಿ ಹಕ್ಕು ಸ್ಥಾಪನೆ ಮಾಡಲು ಬೇಕಾದಷ್ಟು ಅಸ್ತ್ರಗಳಿದ್ದವು, ವಾದಗಳಿದ್ದವು. ಭಾವನಾತ್ಮಕವಾಗಿ ಇಬ್ಬರೂ ಕೂಡ ನೊಂದಿದ್ದರು. ತನ್ನ ಮಗಳ ಮೇಲೆ ಆದ ಹಿಂಸೆಯನ್ನು ಮೆಟರ್ನಲ್ ಗ್ರಾಂಡ್ ಮದರ್ ಕಾವೇರಮ್ಮ ತನ್ನ ಕಂಬನಿಯ ಮಹಾಪೂರದ ಸಮೇತ ಮುಂದಿಡುತ್ತಿದ್ದಳು. ಆ ರೀತಿ ತನ್ನ ಮಗಳ ಮೇಲೆ ಹಿಂಸೆ ನಡೆದುದಕ್ಕೆ ಪಕ್ಕದಲ್ಲೇ ಕುಳಿತಿರುವ ತನ್ನ ಮಗಳ ಅತ್ತೆಯ ಚಿತಾವಣೆಯೇ ಮೂಲ ಎಂದು ಆಕೆ ಸಾಧಿಸುತ್ತಿದ್ದಳು. ಪೆಟರ್ನಲ್ ಗ್ರಾಂಡ್ ಮದರ್ ಸಾವಿತ್ರಮ್ಮ ಕೂಡ ಕಡಿಮೆ ಏನಿರಲಿಲ್ಲ. ಆಕೆ ಕೂಡಾ ತನ್ನ ಹಕ್ಕು